ರಾಜ್ಯ ಮಟ್ಟದಲ್ಲಿಯೂ ಸಹ ಸುಮಾರು 3500 ಲೀಟರ್ ನಷ್ಟು ದ್ರಾವಣವನ್ನು ತುರ್ತು ಸ್ಥಿತಿಗಾಗಿ ಕಾದಿರಿಸಲಾಗಿದೆ.

- ಡೆಂಗಿ ಜ್ವರ ರೋಗ ನಿರ್ವಹಣೆ ಮತ್ತು ರೋಗಲಕ್ಷಣ ಚಿಕಿತ್ಸೆಗಾಗಿ ಬೇಕಾದ ಜೀವರಕ್ಷಕ ಔಷಧಿಗಳ ದಾಸ್ತಾನು ಇರಿಸಲು ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

- ಶಾಲೆಗಳಲ್ಲಿ ಹಾಜರಾತಿ ಆಂಧೋಲನಾ ನಡೆಯುವ ಸಮಯದಲ್ಲಿ ಡೆಂಗ್ಯೂ ಜ್ವರ ನಿಯಂತ್ರಣ ವಿಷಯವನ್ನು ವಿಶೇಷವಾಗಿ ಪ್ರಸ್ತಾಪಿಸಿ, ಉಪಾಧ್ಯಾಯರ ಮೂಲಕ ವಿದ್ಯಾರ್ಥಿಗಳಲ್ಲಿ ಹಾಗು ಸಮುದಾಯದಲ್ಲಿ ಈ ಬಗ್ಗೆ ಅರಿವು ಮೂಡಿಸಲು ಕೋರಿ ಸಾರ್ವಜನಿಕ ಶಿಕ್ಷಣ ಆಯುಕ್ತರಿಗೆ ಅರೆ ಸರ್ಕಾರಿ ಪತ್ರವನ್ನು ಬರೆಯಲಾಗಿದೆ.

ಕಳೆದ ವರ್ಷಕ್ಕೆ ಹೋಲಿಸಿದಾಗ ಮೇ ಅಂತ್ಯದವರೆಗೆ ಶೇಕಡ 50 ರಷ್ಟು ಡೆಂಗಿ ಜ್ವರ ಪ್ರಕರಣಗಳು ಇಳಿಮುಖವಾಗಿರುವುದೇ ಅಲ್ಲದೇ ಇಲ್ಲಿಯವರೆಗೆ ರಾಜ್ಯದಲ್ಲಿ ಯಾವುದೇ ಡೆಂಗಿ ಜ್ವರ ಮರಣ ಪ್ರಕರಣಗಳು ವರದಿಯಾಗಿರುವುದಿಲ್ಲ.

ಬೆಂಗಳೂರು ನಗರದಲ್ಲಿ ಅಕ್ರಮ ಬಿ.ಪಿ.ಎಲ್. ಕಾರ್ಡ್ ಹೊಂದಿರುವವರು

188(157)

ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮಿ ಲೇಔಟ್)

ಅ) ಬೆಂಗಳೂರು ನಗರದಲ್ಲಿ ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಕುಟುಂಬಗಳೆಷ್ಟು;

ಆ) ಇಲ್ಲಿಯವರೆಗೆ ಹೊಸದಾಗಿ ಬಿಪಿಎಲ್ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ ಎಷ್ಟು (ಬೆಂಗಳೂರು ನಗರ ವಿಧಾನ ಸಭಾವಾರು ವಿವರ ನೀಡುವುದು)

ಇ) ಈ ಅರ್ಜಿಗಳಿಗೆ ಯಾವಾಗ ಬಿಪಿಎಲ್ ಪಡಿತರ ಚೀಟಿ ವಿತರಿಸಲಾಗುವುದು.

ಈ) ಬೆಂಗಳೂರು ನಗರದಲ್ಲಿ ಅಕ್ರಮ ಬಿಪಿಎಲ್ ಪಡಿತರ ಚೀಟಿ (ಬೋಗಸ್ ಕಾರ್ಡ್) ಹೊಂದಿರುವವರನ್ನು ಗುರುತಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ದಿನೇಶ್ ಗುಂಡೂರಾವ್ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಸಚಿವರು)

ಅ) ಬೆಂಗಳೂರು ನಗರದಲ್ಲಿರುವ ಬಿಪಿಎಲ್ ಪಡಿತರ ಚೀಟಿಗಳ ವಿವರ ಈ ಕೆಳಗಿನಂತಿದೆ.

ಕ್ರ.ಸಂ.	ವ್ಯಾಪ್ತಿ ಪ್ರದೇಶ	ಎಎವೈ	ಬಿಪಿಎಲ್	ಒಟ್ಟು
1	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ ಒಟ್ಟು	14,875	2,89,214	3,04,089
2	ಬೆಂಗಳೂರು ನಗರ ಒಟ್ಟು	12,010	4,31000	4,43,010

ಆ) ಬೆಂಗಳೂರು ನಗರದಲ್ಲಿ ಇಲ್ಲಿಯವರೆಗೆ ಹೊಸದಾಗಿ ಬಿಪಿಎಲ್ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ 5,03,696 ಬೆಂಗಳೂರು ನಗರ ವಿಧಾನ ಸಭಾವಾರು ವಿವರವನ್ನು ಇದರೊಂದಿಗೆ ಲಗತ್ತಿಸಿದೆ.

ಇ) ಮುದ್ರಣಗೊಂಡ ಕಾರ್ಡುಗಳ ವಿತರಣೆ ಪ್ರಕ್ರಿಯೆಯನ್ನು ಈಗಾಗಲೇ ಪ್ರಾರಂಭಿಸಲಾಗಿರುತ್ತದೆ ಹಾಗೂ ಜನರೇಟ್ ಮಾಡಲಾಗಿರುವ ಪಡಿತರ ಚೀಟಿಗಳನ್ನು ಮುದ್ರಿಸಿಕೊಡುವ ಪ್ರಕ್ರಿಯೆಯೂ ಪ್ರಾರಂಭವಾಗಿರುತ್ತದೆ.

ಬಾಕಿ ಇರುವ ಅರ್ಜಿಗಳನ್ನು First in - First out (FIFO) ಮಾದರಿಯಲ್ಲಿ ವಿಲೇಗೊಳಿಸಲು ಕ್ರಮವಹಿಸಲಾಗುತ್ತಿದೆ.

ಈ) ನಕಲಿ/ಅನರ್ಹ/ಬೋಗಸ್ ಬಿ.ಪಿ.ಎಲ್ ಕಾರ್ಡುಗಳನ್ನು ಪತ್ತೆ ಮಾಡಲು ಈ ಕೆಳಕಂಡ ಕ್ರಮ ಕೈಗೊಳ್ಳಲಾಗಿದೆ.

1) ರಾಜ್ಯದಲ್ಲಿ ಎಲ್ಲಾ ವಿಧದ ಪಡಿತರ ಚೀಟಿಗಳ ಫೋಟೋ ಮತ್ತು ಬಯೋ ಮೆಟ್ರಿಕ್ ಪಡೆದು ಗಣಕೀರಣಗೊಳಿಸಲಾಗುತ್ತಿದೆ. ಗ್ರಾಮಾಂತರ ಪ್ರದೇಶದಲ್ಲಿ ಆಸ್ತಿ ತೆರಿಗೆ ಸಂಖ್ಯೆಯನ್ನು ಹಾಗೂ ನಗರ/ಪಟ್ಟಣ ಪ್ರದೇಶಗಳಲ್ಲಿ ವಿದ್ಯುತ್‌ಚ್ಛಕ್ತಿ ಆರ್.ಆರ್ ಸಂಖ್ಯೆಗಳನ್ನು ಹೊಂದಾಣಿಕೆ ಮಾಡಲಾಗುತ್ತಿದೆ.

2) ಪಡಿತರ ಚೀಟಿದಾರರ ಭಾವಚಿತ್ರ ಹಾಗೂ ಬಯೋ ಮೆಟ್ರಿಕ್ ಸಂಗ್ರಹಿಸುವ ಮೂಲಕ ಅನರ್ಹ ಪಡಿತರ ಚೀಟಿಗಳಿಗೆ ಕಡಿವಾಣ ಹಾಕುವ ವ್ಯವಸ್ಥೆ ಮಾಡಲಾಗಿದೆ.

3) ತನಿಖಾ ತಂಡಗಳನ್ನು ರಚಿಸಿ ನ್ಯಾಯಬೆಲೆ ಅಂಗಡಿಗಳ ಸಮಗ್ರ ತನಿಖೆ ನಡೆಸಲಾಗುತ್ತಿದೆ.

4) ಪ್ರತಿ ಮಾಹೆ ಆಹಾರ ನಿರೀಕ್ಷಕರು ತಲಾ 50 ಪಡಿತರ ಚೀಟಿಗಳಿಗೆ ಪಡಿತರ ವಿತರಣೆ ಮಾಡಿರುವ ಬಗ್ಗೆ ಪರಿಶೀಲಿಸಿ ಮಾಸಿಕ ದೃಡೀಕರಣ ಮಾಡಲಾಗುತ್ತಿದೆ.

5) ಪ್ರತಿ ಮಾಹೆ 7ನೇ ತಾರೀಖಿನಂದು ಆಹಾರ ಅದಾಲತ್ ನಡೆಸಲಾಗುತ್ತಿದೆ.

6) ಪಡಿತರ ವಿತರಣೆ ಮಾಡಿರುವ ಬಗ್ಗೆ ಮಾಹೆಯಾನ ದೃಡೀಕರಣ ಪಡೆಯಲಾಗುತ್ತಿದೆ.

7) ಒಂದಕ್ಕಿಂತ ಹೆಚ್ಚು ಪಡಿತರ ಚೀಟಿಗಳನ್ನು ಹೊಂದಿರುವುದನ್ನು ಪತ್ತೆ ಹಚ್ಚಿ ರದ್ದುಪಡಿಸಲು ಕ್ರಮ ವಹಿಸಲಾಗಿದೆ.

8) ಇಲಾಖೆಯ ವೆಬ್ ಸೈಟ್‌ನಲ್ಲಿ ಎಲ್ಲಾ ಪಡಿತರ ಚೀಟಿಗಳ ಮಾಹಿತಿಯನ್ನು ಸಾರ್ವಜನಿಕರಿಗೆ ಪ್ರದರ್ಶಿಸಲಾಗಿದೆ. ಈ ಮಾಹಿತಿಯನ್ನು ಆಧರಿಸಿ ಸಾರ್ವಜನಿಕರು ಯಾವುದೇ ಪಡಿತರ ಚೀಟಿ ಬಗ್ಗೆ ತಮ್ಮ ಅಭಿಪ್ರಾಯವನ್ನು ದಾಖಲಿಸಬಹುದು. ಇದರ ಆಧಾರದ ಮೇಲೆ ಅನರ್ಹ ಪಡಿತರ ಚೀಟಿ ಹೊಂದಿರುವ ಮಾಹಿತಿ ಸಂಗ್ರಹಿಸಲಾಗುವುದು.

9) ಯಾವುದಾದರೂ ದೂರುಗಳಿದ್ದಲ್ಲಿ 1967 ಸಂಖ್ಯೆಗೆ ದೂರು ದಾಖಲಿಸಬಹುದಾಗಿರುತ್ತದೆ.

10) ಆನ್ ಲೈನ್‌ನಲ್ಲಿ ಅರ್ಜಿ ಹಾಕುವ ವ್ಯವಸ್ಥೆ ಮಾಡಲಾಗಿರುತ್ತದೆ ಮತ್ತು ಪಡಿತರ ಚೀಟಿ ಮುದ್ರಣ ಮತ್ತು ವಿತರಣೆ ಕಾರ್ಯವನ್ನು ಆನ್‌ಲೈನ್‌ನಲ್ಲಿ ಆಹಾರ ನಿರೀಕ್ಷಕರ ಬಯೋ ದೃಢೀಕರಣದೊಂದಿಗೆ ನಿರ್ವಹಿಸುತ್ತಿದ್ದು ಪಡಿತರ ಚೀಟಿ ಪಡೆಯುವ ಸಂದರ್ಭದಲ್ಲಿಯೂ ಸಹ ಅರ್ಹ ಅರ್ಜಿದಾರರ ಬಯೋ ಪಡೆದೇ ಪಡಿತರ ಚೀಟಿ ವಿತರಿಸಲಾಗುತ್ತಿದೆ.

11) ಬೆಂಗಳೂರು ನಗರದಲ್ಲಿ 144 ನ್ಯಾಯಬೆಲೆ ಅಂಗಡಿಗಳಲ್ಲಿ ಇ–ಪಡಿತರ ಯಂತ್ರಗಳನ್ನು ಅಳವಡಿಸಲಾಗಿದ್ದು, ಉಳಿದ ನ್ಯಾಯಬೆಲೆ ಅಂಗಡಿಗಳಲ್ಲಿಯೂ ಇ–ಪಡಿತರ ಯಂತ್ರಗಳನ್ನು ಅಳವಡಿಸಲು ಕ್ರಮ ವಹಿಸಲಾಗುತ್ತಿದೆ. ಇದರಿಂದಾಗಿ ಅರ್ಹ ಕಾರ್ಡುದಾರರು ಮಾತ್ರವೇ ಆಹಾರಧಾನ್ಯ ಪಡೆಯಲು ಅನುಕೂಲವಾಗುತ್ತದೆ.

12) EPIC & UID ಸಂಖ್ಯೆಗಳ ಸಂಗ್ರಹಣೆ ಮತ್ತು ಹೊಂದಾಣಿಕೆ ಕಾರ್ಯ ಪ್ರಗತಿಯಲ್ಲಿದೆ.

13) ಸಾರ್ವಜನಿಕರು / ಪಡಿತರ ಚೀಟಿದಾರರು ಎಸ್.ಎಂ.ಎಸ್. ಮೂಲಕ 9212357123 ಸಂಖ್ಯೆಗೆ ದೂರು ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ.

14) ಎಸ್.ಎಂ.ಎಸ್. ಸಂದೇಶದ ಮೂಲಕ ಪಡಿತರ ಚೀಟಿಯ ಸ್ಥೀತಿ, ಪಡಿತರ ಚೀಟಿಗೆ ನೀಡಲಾದ ಹಂಚಿಕೆ ಹಾಗೂ ನ್ಯಾಯಬೆಲೆ ಅಂಗಡಿಗೆ ನೀಡಲಾದ ಹಂಚಿಕೆ ವಿವರ ಇವುಗಳ ಮಾಹಿತಿಯುಳ್ಳ ಸೇವೆಯನ್ನು ನೀಡಲಾಗುತ್ತಿದ್ದು, ಪಡಿತರ ವಿತರಣೆಯಲ್ಲಿ ಪಾರದರ್ಶಕತೆಯನ್ನು ತರಲಾಗಿದೆ.

15) 2010ಕ್ಕಿಂತ ಪೂರ್ವದಲ್ಲಿ ವಿತರಿಸಲಾಗಿರುವ ಖಾಯಂ ಪಡಿತರ ಚೀಟಿಗಳ ನೈಜತೆ ಬಗ್ಗೆ ಪರಿಶೀಲಿಸಿ ನವೀಕರಣ ಕಾರ್ಯವನ್ನು ನಡೆಸಲಾಗುತ್ತಿದೆ.

16) ನ್ಯಾಯಬೆಲೆ ಅಂಗಡಿಗಳಲ್ಲಿ ಎಲ್ಲಾ ಅರ್ಹ ಫಲಾನುಭವಿಗಳ ಹಂಚಿಕೆ ಪಟ್ಟಿ (Eligibility List) ಯನ್ನು ಪ್ರದರ್ಶಿಸಿ, ಪ್ರತಿ ಮಾಹೆ ಕಾರ್ಡುದಾರರಿಂದ ಆಹಾರಧಾನ್ಯ ವಿತರಿಸಿದ ಬಾಬ್ತು ಸಹಿ ಪಡೆಯಲಾಗುತ್ತಿದೆ ಮತ್ತು ಪ್ರತಿ ಮಾಹೆ ವಿತರಣೆ ಮುಗಿದ ಬಳಿಕ ಈ ಪಟ್ಟಿಯನ್ನು ಆಹಾರ ನಿರೀಕ್ಷಕರು ದೃಡೀಕರಿಸುವ ಪದ್ಧತಿ ಜಾರಿಗೊಳಿಸಲಾಗಿದೆ.

ಅನುಬಂಧ (ಹೊಸದಾಗಿ ಬಿಪಿಎಲ್ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿರುವವರ ವಿಧಾನ ಸಭಾ ಕ್ಷೇತ್ರವಾರು ಮಾಹಿತಿ)

ಕ್ರ.ಸಂ.	ಜಿಲ್ಲೆ	ವಲಯ	ವಿಧಾನ ಸಭಾ ಕ್ಷೇತ್ರದ ಹೆಸರು	ಹೊಸದಾಗಿ ಬಿಪಿಎಲ್ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ
1	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ಉತ್ತರ ವಲಯ	ಬ್ಯಾಟರಾಯನಪುರ	3998
2	ಬೆಂಗಳೂರು ನಗರ ಜಿಲ್ಲೆ	ಬೆಂಗಳೂರು ಉತ್ತರ (ಅ)	ಬ್ಯಾಟರಾಯನಪುರ	11931
			ಬ್ಯಾಟರಾಯನಪುರ ಒಟ್ಟು	**15929**
3	ಬೆಂಗಳೂರು ನಗರ ಜಿಲ್ಲೆ	ಬೆಂಗಳೂರು ದಕ್ಷಿಣ ತಾಲ್ಲೂಕು	ಬೊಮ್ಮನಹಳ್ಳಿ	29089
			ಬೊಮ್ಮನಹಳ್ಳಿ ಒಟ್ಟು	**29089**
4	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ದಕ್ಷಿಣ ವಲಯ	ಬೆಂಗಳೂರು ದಕ್ಷಿಣ	225
5	ಬೆಂಗಳೂರು ನಗರ ಜಿಲ್ಲೆ	ಬೆಂಗಳೂರು ದಕ್ಷಿಣ ತಾಲ್ಲೂಕು	**ಬೆಂಗಳೂರು ದಕ್ಷಿಣ**	41243
			ಬೆಂಗಳೂರು ದಕ್ಷಿಣ ಒಟ್ಟು	**41468**
6	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ಉತ್ತರ ವಲಯ	ಸರ್ವಜ್ಞ ನಗರ	4962
7	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ಪೂರ್ವ ವಲಯ	ಸರ್ವಜ್ಞ ನಗರ	3421
8	ಬೆಂಗಳೂರು ನಗರ ಜಿಲ್ಲೆ	ಬೆಂಗಳೂರು ಉತ್ತರ ತಾಲ್ಲೂಕು	ಸರ್ವಜ್ಞ ನಗರ	1313
			ಸರ್ವಜ್ಞ ನಗರ ಒಟ್ಟು	**9696**
9	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ದಕ್ಷಿಣ ವಲಯ	**ಶಾಂತಿನಗರ**	101
10	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ಪೂರ್ವ ವಲಯ	ಶಾಂತಿನಗರ	3764
			ಶಾಂತಿನಗರ ಒಟ್ಟು	**3865**
11	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ಪಶ್ಚಿಮ ವಲಯ	ವಿಜಯನಗರ	20107
			ವಿಜಯನಗರ ಒಟ್ಟು	**20107**
12	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ಉತ್ತರ ವಲಯ	ಪುಲಕೇಶಿ ನಗರ	13366
			ಪುಲಕೇಶಿ ನಗರ ಒಟ್ಟು	**13366**
13	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ದಕ್ಷಿಣ ವಲಯ	ಪದ್ಮನಾಭನಗರ	15009

ಕ್ರ.ಸಂ.	ಜಿಲ್ಲೆ	ವಲಯ	ವಿಧಾನ ಸಭಾ ಕ್ಷೇತ್ರದ ಹೆಸರು	ಹೊಸದಾಗಿ ಬಿಪಿಎಲ್ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ
			ಪದ್ಮನಾಭನಗರ ಒಟ್ಟು	**15009**
14	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ದಕ್ಷಿಣ ವಲಯ	ಬಸವನಗುಡಿ	4953
			ಬಸವನಗುಡಿ ಒಟ್ಟು	**4953**
15	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ದಕ್ಷಿಣ ವಲಯ	ಬಿ.ಟಿ.ಎಂ.ಲೇಔಟ್	9099
			ಬಿ.ಟಿ.ಎಂ.ಲೇಔಟ್ ಒಟ್ಟು	**9099**
16	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ಪೂರ್ವ ವಲಯ	**ಸಿ.ವಿ.ರಾಮನ್ ನಗರ**	**5817**
			ಸಿ.ವಿ.ರಾಮನ್ ನಗರ ಒಟ್ಟು	**5817**
17	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ಕೇಂದ್ರ ವಲಯ	**ಶಿವಾಜಿನಗರ**	1018
18	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ಉತ್ತರ ವಲಯ	**ಶಿವಾಜಿನಗರ**	2443
19	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ಪೂರ್ವ ವಲಯ	**ಶಿವಾಜಿನಗರ**	7306
			ಶಿವಾಜಿನಗರ ಒಟ್ಟು	**10767**
20	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ಪಶ್ಚಿಮ ವಲಯ	ಮಲ್ಲೇಶ್ವರಂ	3788
21	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ಉತ್ತರ ವಲಯ	ಮಲ್ಲೇಶ್ವರಂ	5742
			ಮಲ್ಲೇಶ್ವರಂ ಒಟ್ಟು	**9530**
22	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ಪಶ್ಚಿಮ ವಲಯ	ಮಹಾಲಕ್ಷ್ಮಿ ಲೇಔಟ್	21169
23	ಬೆಂಗಳೂರು ನಗರ ಜಿಲ್ಲೆ	ಬೆಂಗಳೂರು ಉತ್ತರ ತಾಲ್ಲೂಕು	ಮಹಾಲಕ್ಷ್ಮಿ ಲೇಔಟ್	6816
			ಮಹಾಲಕ್ಷ್ಮಿ ಲೇಔಟ್ ಒಟ್ಟು	**27985**
24	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ಪೂರ್ವ ವಲಯ	ಮಹದೇವಪುರ	3197
25	ಬೆಂಗಳೂರು ನಗರ ಜಿಲ್ಲೆ	ಬೆಂಗಳೂರು ಪೂರ್ವ ತಾಲ್ಲೂಕು	ಮಹದೇವಪುರ	14299
			ಮಹದೇವಪುರ ಒಟ್ಟು	**17496**
26	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ಪಶ್ಚಿಮ ವಲಯ	ಯಶವಂತಪುರ	2226

ಕ್ರ.ಸಂ.	ಜಿಲ್ಲೆ	ವಲಯ	ವಿಧಾನ ಸಭಾ ಕ್ಷೇತ್ರದ ಹೆಸರು	ಹೊಸದಾಗಿ ಬಿಪಿಎಲ್ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ
27	ಬೆಂಗಳೂರು ನಗರ ಜಿಲ್ಲೆ	ಬೆಂಗಳೂರು ಉತ್ತರ ತಾಲ್ಲೂಕು	ಯಶವಂತಪುರ	21846
			ಯಶವಂತಪುರ ಒಟ್ಟು	**24072**
28	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ಉತ್ತರ ವಲಯ	ಯಲಹಂಕ	5708
29	ಬೆಂಗಳೂರು ನಗರ ಜಿಲ್ಲೆ	ಬೆಂಗಳೂರು ಉತ್ತರ (ಅ)	ಯಲಹಂಕ	18893
			ಯಲಹರಕ ಒಟ್ಟು	**24601**
30	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ದಕ್ಷಿಣ ವಲಯ	ಚಿಕ್ಕಪೇಟೆ	4706
31	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ಕೇಂದ್ರ ವಲಯ	ಚಿಕ್ಕಪೇಟೆ	3380
			ಚಿಕ್ಕಪೇಟೆ ಒಟ್ಟು	**8086**
32	ಬೆಂಗಳೂರು ನಗರ ಜಿಲ್ಲೆ	ಆನೇಕಲ್ ತಾಲ್ಲೂಕು	ಆನೇಕಲ್	25968
			ಆನೇಕಲ್ ಒಟ್ಟು	**25968**
33	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ದಕ್ಷಿಣ ವಲಯ	ಜಯನಗರ	11573
			ಜಯನಗರ ಒಟ್ಟು	**11573**
34	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ಉತ್ತರ ವಲಯ	ರಾಜರಾಜೇಶ್ವರಿ ನಗರ	13960
35	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ಪಶ್ಚಿಮ ವಲಯ	ರಾಜರಾಜೇಶ್ವರಿ ನಗರ	13943
36	ಬೆಂಗಳೂರು ನಗರ ಜಿಲ್ಲೆ	ಬೆಂಗಳೂರು ದಕ್ಷಿಣ ತಾಲ್ಲೂಕು	ರಾಜರಾಜೇಶ್ವರಿ ನಗರ	2613
			ರಾಜರಾಜೇಶ್ವರಿ ನಗರ ಒಟ್ಟು	**30516**
37	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ಕೇಂದ್ರ ವಲಯ	ರಾಜಾಜಿನಗರ	2831
38	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ಪಶ್ಚಿಮ ವಲಯ	ರಾಜಾಜಿನಗರ	8252
			ರಾಜಾಜಿನಗರ ಒಟ್ಟು	**11083**
39	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ಉತ್ತರ ವಲಯ	ಹೆಬ್ಬಾಳ	12504
			ಹೆಬ್ಬಾಳ ಒಟ್ಟು	**12504**

ಕ್ರ.ಸಂ.	ಜಿಲ್ಲೆ	ವಲಯ	ವಿಧಾನ ಸಭಾ ಕ್ಷೇತ್ರದ ಹೆಸರು	ಹೊಸದಾಗಿ ಬಿಪಿಎಲ್ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ
40	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ಪೂರ್ವ ವಲಯ	ಕೆ.ಆರ್.ಪುರ	17471
41	ಬೆಂಗಳೂರು ನಗರ ಜಿಲ್ಲೆ	ಬೆಂಗಳೂರು ಪೂರ್ವ ತಾಲ್ಲೂಕು	ಕೆ.ಆರ್.ಪುರ	21685
			ಕೆ.ಆರ್.ಪುರ ಒಟ್ಟು	**39156**
42	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ಕೇಂದ್ರ ವಲಯ	ಗಾಂಧಿನಗರ	14802
43	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ಪಶ್ಚಿಮ ವಲಯ	ಗಾಂಧಿನಗರ	1993
			ಗಾಂಧಿನಗರ ಒಟ್ಟು	**16795**
44	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ಪಶ್ಚಿಮ ವಲಯ	ಗೋವಿಂದರಾಜನಗರ	22031
			ಗೋವಿಂದರಾಜನಗರ ಒಟ್ಟು	**22031**
45	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ಉತ್ತರ ವಲಯ	ಹೂಸರಹಳ್ಳಿ	1316
46	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ಪಶ್ಚಿಮ ವಲಯ	ದಾಸರಹಳ್ಳಿ	4512
47	ಬೆಂಗಳೂರು ನಗರ ಜಿಲ್ಲೆ	ಬೆಂಗಳೂರು ಉತ್ತರ ತಾಲ್ಲೂಕು	ದಾಸರಹಳ್ಳಿ	18427
			ದಾಸರಹಳ್ಳಿ ಒಟ್ಟು	**24255**
48	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ಕೇಂದ್ರ ವಲಯ	ಚಾಮರಾಜಪೇಟೆ	2610
49	ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	ಪಶ್ಚಿಮ ವಲಯ	ಚಾಮರಾಜಪೇಟೆ	16270
			ಚಾಮರಾಜಪೇಟೆ ಒಟ್ಟು	**18880**
			ಒಟ್ಟು	**503696**